**RNU AIR DHARWAD**

# OCTOBER 28, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **'ಮನ್ ಕಿ ಬಾತ್': 'ಜಾಗತಿಕ ಎನಿಮೇಶನ್ ಪಾವರ್ ಹೌಸ್' ಆಗಿ ಭಾರತವನ್ನು ರೂಪಿಸೋಣ – ಪ್ರಧಾನಿ ಆಶಯ.**
- **'ಕೂಸಿನ ಮನೆ'; ಮಹಾತ್ಮ ಗಾಂಧಿ ನರೇಗಾ ಯೋಜನೆ, ತಾಯಂದಿರ ತೊಡಗುವಿಕೆ ಪ್ರಮಾಣದಲ್ಲಿ, ಗಣನೀಯ ಏರಿಕೆ – ಪ್ರಿಯಾಂಕ್ ಖರ್ಗೆ.**
- **ನಾಡಿನ ರೈತರ ಸಮಸ್ಯೆಗಳಿಗೆ, ಸಕಾಲಿಕ ಪರಿಹಾರ ಕಂಡುಕೊಳ್ಳಲು, e-SAP ತಂತ್ರಾಂಶ – ಎನ್.ಚಲುವರಾಯ ಸ್ವಾಮಿ.**
- **'ಅರೆಭಾ ೆ ಗಡಿನಾಡ ಉತ್ಸವ'; ಅರೆಭಾ ೆ, ಸ್ಥಳೀಯ ಭಾ ೆಯಾದರೂ, ವಿಶಾಲವಾಗಿ ಬೆಳೆದಿದೆ – ಸದಾನಂದ ಮಾವಜಿ.**

<><><>

**ಈಗ ವಾರ್ತೆಗಳ ವಿವರ**

<><><>

**ಇಂದು ಅಂತಾರಾಷ್ಟ್ರೀಯ ಎನಿಮೇಶನ್ ದಿನಾಚರಣೆ ಹಿನ್ನೆಲೆ, ಭಾರತವನ್ನು, 'ಜಾಗತಿಕ ಎನಿಮೇಶನ್ ಪಾವರ್ ಹೌಸ್' ಆಗಿ ರೂಪಿಸುವಲ್ಲಿ, ಎನಿಮೇಶನ್ ತಂತ್ರಜ್ಞರು, ಕ್ಷೇತ್ರದ ವಿಫುಲ ಅವಕಾಶಗಳನ್ನು ಬಳಸಿಕೊಂಡು, ಮಹತ್ವದ ಕೊಡುಗೆ ನೀಡುವಂತೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್' ಕಾರ್ಯಕ್ರಮದ, 115ನೇ ಆವೃತ್ತಿಯಲ್ಲಿ, ದೇಶ–ವಿದೇಶಗಳ ಭಾರತೀಯರನ್ನು ಉದ್ದೇಶಿಸಿ, ಪ್ರಧಾನಮಂತ್ರಿ ಮಾತನಾಡಿದರು.**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 60 ಸೆಕೆಂದುಗಳು**

<><><>

ಕಾನೂನಿನಡಿ 'ಡಿಜಿಟಲ್ ಅರೆಸ್ಟ್' ವ್ಯವಸ್ಥೆಯೇ ಇಲ್ಲ. ಆನ್ಲೈನ್ ವಂಚನೆ ಪ್ರಕರಣಗಳ ನಿದರ್ಶನದ ಜೊತೆ, ವಿಜಯಪುರದ ಸಂತೋಷ ಚೌಧರಿ ಅವರ ಅನುಭವವನ್ನು ಮನದ ಮಾತಿನಲ್ಲಿ ಪ್ರಧಾನಮಂತ್ರಿ ಬಿತ್ತರಿಸಿ, ಜನತೆ ಆನ್ಲೈನ್ ವಂಚನೆಗೆ ಮೋಸ ಹೋಗದಂತೆ, ಜಾಗೃತಿ ಮೂಡಿಸಿದರು.

<><><>

ಸಂತೋಷ ಚೌಧರಿ ಧ್ವನಿ 29 ಸೆಕೆಂದುಗಳು

<><><>

ಸೈಬರ್ ಕ್ರೈಮ್ ಉಚಿತ ಸಹಾಯವಾಣಿ 1-9-3-0 ಮತ್ತು cybercrime.gov.in ಜಾಲತಾಣದಲ್ಲಿ ದೂರು ದಾಖಲಿಸುವಂತೆ ಹಾಗೂ Save Digital India ಹ್ಯಾಷ್‌ಟ್ಯಾಗ್ ಮೂಲಕ, ಸಾಮಾಜಿಕ ಮಾಧ್ಯಮದಲ್ಲಿ ಜಾಗ್ರತೆ ಮೂಡಿಸಿ ಎಂದು, ಪ್ರಧಾನಮಂತ್ರಿ ಕೋರಿದರು.

<><><>

ನಗರ ಪ್ರದೇಶದ ಉದ್ಯೋಗಸ್ಥ ತಾಯಂದಿರಿಗೆ, ಉದ್ಯೋಗ ಸ್ಥಳದಲ್ಲಿ ಮಗುವಿನ ಪೋಷಣೆಗೆ ಅನುಕೂಲ ಕಲ್ಪಿಸಲು ಆರಂಭಿಸಿದ, "ಬೇಬಿ ಕೇರ್ ಸೆಂಟರ್" ಪರಿಕಲ್ಪನೆಯನ್ನು, ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಿ, "ಕೂಸಿನ ಮನೆ" ಯೋಜನೆ ರೂಪಿಸಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಈ ಮಾಹಿತಿ ಪ್ರಕಟಿಸಿರುವ ಸಚಿವರು, ಕಲ್ಬುರ್ಗಿ ಜಿಲ್ಲೆಯೊಂದರಲ್ಲೇ, 207 'ಕೂಸಿನ ಮನೆ' ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆಯಿಂದಾಗಿ, ತಾಯಂದಿರು ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ, ತೊಡಗಿಸಿಕೊಳ್ಳುವ ಪ್ರಮಾಣ, ಶೇಕಡ 2 ದಶಾಂಶ 3-6 ರಷ್ಟು ಹೆಚ್ಚಾಗಿದೆ ಎಂದರು. "ಯೋಜನೆ ಒಂದು, ಪ್ರಯೋಜನ ಹಲವು" ಎಂಬಂತೆ ಈ ಯೋಜನೆ, ಎಳೆ ವಯಸ್ಸಿನಲ್ಲಿಯೇ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅನುಕೂಲವಾಗಲಿದೆ, ಅಪೌಷ್ಟಿಕತೆಯನ್ನು ಗುರುತಿಸಿ ನಿವಾರಿಸಲು ಸಹಕಾರಿಯಾಗಲಿದೆ, ಇದರೊಂದಿಗೆ ಮಹಿಳೆಯರ ದುಡಿಮೆಯನ್ನು ಹೆಚ್ಚಿಸಲು ನೆರವಾಗಲಿದೆ. ಗ್ರಾಮೀಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಇಲಾಖೆ ದೃಢ ಹೆಜ್ಜೆಗಳನ್ನು ಇಡುತ್ತಿದೆ ಎಂದು ಅವರು ಹೇಳಿದ್ದಾರೆ.

<><><>

ಪರಿಸರ ಸಂರಕ್ಷಣೆಯ ಸದುದ್ದೇಶದಿಂದ, ಸರ್ವೋಚ್ಚ ನ್ಯಾಯಾಲಯ ಮಹತ್ವದ ತೀರ್ಪು ನೀಡಿದ್ದು, ರಾಜ್ಯ ಸರ್ಕಾರ ಈ ಆದೇಶದನ್ವಯ, ದೀಪಾವಳಿಯಲ್ಲಿ ಪಟಾಕಿ ನಿಷೇಧಿಸುವ ನಿರ್ಧಾರ ಕೈಗೊಂಡಿದೆ ಎಂದು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸ್ಪಷ್ಟ ಪಡಿಸಿದ್ದಾರೆ.ದೀಪಾವಳಿ, ಗುರು ನಾನಕ್ ಪುರಬ್ ನಂತಹ, ಹಬ್ಬದ ದಿನಗಳಲ್ಲಿ, ರಾತ್ರಿ 8 ಗಂಟೆಯಿಂದ 10 ಗಂಟೆಯ ವರೆಗೆ ಮಾತ್ರ, ಪರಿಸರ ಸ್ನೇಹಿ ಹಸಿರು ಪಟಾಕಿ ಸಿಡಿಸಲು, ಸುಪ್ರೀಂ ಕೋರ್ಟ್ ಅವಕಾಶ ನೀಡಿದೆ. 125 ಡೆಸಿಬಲ್ ಗಿಂತ ಹೆಚ್ಚು ಸದ್ದು ಮಾಡುವ ಪಟಾಕಿಗಳನ್ನು ನಿಷೇಧಿಸಲು, ಆದೇಶಿಸಿದೆ. ಸರ್ಕಾರ ಈ ಆದೇಶವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲಿದೆ ಎಂದು, ಎಕ್ಸ್ ಜಾಲತಾಣದಲ್ಲಿ ಸಚಿವರು ತಿಳಿಸಿದ್ದಾರೆ.

<><><>

ಈಗ ಪ್ರಕಟಣೆ..

ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

<><><>

(32 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬೆಳಗಾವಿಯಲ್ಲಿ 3 ಲಕ್ಷಕ್ಕಿಂತ ಅಧಿಕ ಕಾರ್ಮಿಕರು, ವಿಮೆ ಚೀಟಿಗಳನ್ನು ಹೊಂದಿದ್ದು, ಉತ್ತಮ ಆರೋಗ್ಯ ಸೌಲಭ್ಯ ದೊರಕಿಸಿ ಕೊಡಲು, 152 ಕೋಟಿ ರೂಪಾಯಿ ವೆಚ್ಚದಲ್ಲಿ, ನೂತನ ಕಾರ್ಮಿಕ ವಿಮಾ ಆಸ್ಪತ್ರೆ ನಿರ್ಮಿಸಲಾಗುವುದು ಎಂದು, ಕೇಂದ್ರದ ಕಾರ್ಮಿಕ ಖಾತೆ ರಾಜ್ಯ ಸಚಿವರಾದ, ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಬೆಳಗಾವಿಯ ಆಶೋಕ ನಗರದ ಕಾರ್ಮಿಕ ವಿಮಾ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು. ಇ.ಎಸ್.ಐ ಕಾರ್ಡುದಾರ ಕಾರ್ಮಿಕರಿಗೆ, ಆಯುಷ್‌ಮಾನ್ ಭಾರತ ಆರೋಗ್ಯ ಕಾರ್ಡಿನ ಸೌಲಭ್ಯಗಳು ದೊರೆಯಬೇಕೆಂಬುದು, ಕೇಂದ್ರದ ಧ್ಯೇಯ. ಕಾರ್ಮಿಕರ ಚಿಕಿತ್ಸಾ ವೆಚ್ಚವನ್ನು, ಕೇಂದ್ರ ಸರ್ಕಾರವೇ ಭರಿಸಲಿದೆ ಎಂದು, ಸಚಿವರು ತಿಳಿಸಿದರು.

<><><>

ವಿಜಯಪುರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ, ನಾಗರಿಕ ಸೌಲಭ್ಯ ವಸತಿ ನಿಲಯದ ಭೂಮಿ ಪೂಜೆ ನೆರವೇರಿತು. ರಾಜ್ಯ ಸಭಾ ಸಂಸದರಾದ, ಸುಧಾ ಮೂರ್ತಿ ಅವರ, ಪ್ರದೇಶಾಭಿವೃದ್ಧಿ ಯೋಜನೆಯಡಿ, ಈ ಕಟ್ಟಡ ನಿರ್ಮಾಣವಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ತಿಳಿಸಿದ್ದಾರೆ. ಉದ್ದೇಶಿತ ವಸತಿ ನಿಲಯದಲ್ಲಿ, ಆಸ್ಪತ್ರೆಯಲ್ಲಿ ದಾಖಲಾದ, ಆರೋಗ್ಯಾಕಾಂಕ್ಷಿಗಳ ಸಹಾಯಕ್ಕೆ ಬರುವ ಸಂಬಂಧಿಗಳು ತಂಗಲು, ವಿಶ್ರಮಿಸಲು, ಅವಕಾಶ ಕಲ್ಪಿಸಲಾಗುವುದು. ಎಲ್ಲ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಸಚಿವರು ಪ್ರಕಟಿಸಿದ್ದಾರೆ.

<><><>

ನಾಡಿನ ರೈತರು ನಿತ್ಯ ಎದುರಿಸುವ ಹತ್ತಾರು ಸಮಸ್ಯೆಗಳಿಗೆ, ಪರಿಹಾರ ಕಂಡುಕೊಳ್ಳಲು, ನಿರಂತರವಾಗಿ ಶ್ರಮಿಸುತ್ತಿರುವ ಕೃಷಿ ಇಲಾಖೆ, **e-SAP** ಹೊಸ ತಂತ್ರಾಂಶವನ್ನು ಅನು ್ಠಾನ ಗೊಳಿಸಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ, ಈ ಮಾಹಿತಿ ನೀಡಿರುವ ಸಚಿವರು, ಇ–ಸ್ಯಾಪ್ ತಂತ್ರಾಂಶ, ಬೆಳೆಗಳ ಕೀಟ ಬಾಧೆ, ರೋಗ ನಿಯಂತ್ರಣ ಹಾಗೂ ಪೋ ’ಕಾಂಶ ನಿರ್ವಹಣೆಯ ಕುರಿತ, ನಿಖರವಾದ ಮಾಹಿತಿ ಮತ್ತು ಸಲಹೆಯನ್ನು ರೈತರಿಗೆ ನೀಡುತ್ತಿದೆ ಎಂದಿದ್ದಾರೆ. ಬೆಳೆ ಹಾನಿ ತಡೆಯುವ ಜೊತೆಗೆ, ಸಕಾಲಿಕ ಸಮಯದಲ್ಲಿ ಹಾನಿಗೆ ಸೂಕ್ತ ಪರಿಹಾರ ಕಲ್ಪಿಸಲು, ಇ–ಸ್ಯಾಪ್ ತಂತ್ರಾಂಶ ಅತ್ಯಂತ ಉಪಯುಕ್ತವಾಗಿದೆ. ಈ ವರೆಗೆ, 1 ಲಕ್ಷಕ್ಕೂ ಅಧಿಕ ರೈತರಿಗೆ ನೆರವು ದೊರೆತಿದೆ ಎಂದು, ಹೇಳಿದ್ದಾರೆ.

<><><>

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, "ಕೃಷಿ ಪರಿಸರದಲ್ಲಿ ವಿಶೇ ’ಚೇತನ ಮಕ್ಕಳೊಂದಿಗೆ ಒಂದು ದಿನ" ಕಾರ್ಯಕ್ರಮ, ಆಯೋಜಿಸಿತ್ತು. ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ನೂರಕ್ಕೂ ಹೆಚ್ಚು ವಿಶೇ ’ ಔ ’ಧೀಯ ಗುಣಗಳ ಸಸಿಗಳ ಬಗ್ಗೆ, ಸಿಬ್ಬಂದಿ ಮಾಹಿತಿ ನೀಡಿ, ಅವುಗಳ ಸದುಪಯೋಗದ ಕುರಿತು ಪೋ ’ಕರಿಗೆ ವಿವರಿಸಿದರು.

ವಿಶೇ  'ಚೇತನ ಮಕ್ಕಳ ಶಾಲಾ ಪ್ರಾಂಶುಪಾಲ ಪನ್ನಗ ಬಾಬು ಮಾತನಾಡಿ, ಸಾಮಾನ್ಯ ಮಕ್ಕಳಂತೆ, ವಿಶೇಷ ಮಕ್ಕಳೂ ತಮ್ಮ ಆಸಕ್ತಿಗೆ ಅನುಗುಣವಾಗಿ ಕಲಿಯಲಿ ಎಂಬ ಸದುದ್ದೇಶದಿಂದ, ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

<><><>

ಅರೆಭಾ ೆ, ಒಂದು ಸಮುದಾಯ ಅಥವಾ ಸಮಾಜಕ್ಕೆ ಸೀಮಿತವಾಗದೆ, ಎಲ್ಲರ ಸ್ಥಳೀಯ ಭಾ ೆಯಾಗಿ, ವಿಶಾಲವಾಗಿ ಬೆಳೆದಿದೆ ಎಂದು, ಅರೆಭಾ ೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾದೆಮಿ ಅಧ್ಯಕ್ಷ ಸದಾನಂದ ಮಾವಜಿ ಹೇಳಿದ್ದಾರೆ. ಕಾಸರಗೋಡು ಜಿಲ್ಲೆ, ಬಂದಡ್ಕ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ, 'ಅರೆಭಾ ೆ ಗಡಿನಾಡ ಉತ್ಸವ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಸುಳ್ಯ ತಾಲೂಕಿನ ಪಿ.ಎಸ್.ಗಂಗಾಧರ ಹೊಂಬಾಳೆ ಅರಳಿಸಿ, ಚಾಲನೆ ನೀಡಿ, ಅರೆಭಾ ೆ ಮಾತನಾಡುವವರು ದಕ್ಷಿಣಕನ್ನಡ, ಕೊಡಗು, ಕಾಸರಗೋಡು, ಮೈಸೂರು ಹಾಗೂ ಬೆಂಗಳೂರಿನಲ್ಲಿ ನೆಲೆಸಿದ್ದಾರೆ ಎಂದರು.

<><><>

ಜರ್ಮನಿಯ ಬರ್ಲಿನ್‌ನಲ್ಲಿ ನಡೆದ, ವರ್ಲ್ಡ್ ರೇಲ್ವೇಸ್ ವಾಲಿಬಾಲ್ ಚಾಂಪಿಯನ್ ಶಿಪ್‌ನಲ್ಲಿ, ಭಾರತೀಯ ರೇಲ್ವೇಸ್ ತಂಡ, ಚಾಂಪಿಯನ್ ಪಟ್ಟವನ್ನು ಗೆದ್ದುಕೊಂಡಿದೆ. ಈ ತಂಡದಲ್ಲಿ, ಉಡುಪಿಯ ಕಾರ್ಕಳ ತಾಲೂಕಿನ, ಬೈಲೂರು ಗ್ರಾಮದ ಸುಧೀರ್ ಶೆಟ್ಟಿ ಹಾಗೂ ದಕ್ಷಿಣಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲೂಕಿನ, ಅಶ್ವಲ್ ರೈ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂದು, ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಪ್ರಕಟಿಸಿದ್ದಾರೆ.

<><><>

ಉತ್ತರಪ್ರದೇಶದ ಮಿರತ್ ನಲ್ಲಿ ಜರುಗಿದ, ಪದವಿ ಪೂರ್ವ ಕಾಲೇಜುಗಳ ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ, ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದ, ಉತ್ತರಕನ್ನಡ ಜಿಲ್ಲೆ ಹಳಿಯಾಳ ತಾಲೂಕಿನ, ಕ್ರೀಡಾ ವಸತಿ ನಿಲಯದ ಉದಯೋನ್ಮುಖ ಕುಸ್ತಿಪಟುಗಳಾದ, ಪ್ರತೀಕ್ಷಾ ಭೋವಿ ಹಾಗೂ ಮನಿ ಾ ಸಿದ್ದಿ, ಕ್ರಮವಾಗಿ 65 ಕಿಲೋ ಹಾಗೂ 72 ಕಿಲೋ ಮಹಿಳೆಯರ ವಿಭಾಗದಲ್ಲಿ, ತೃತೀಯ ಸ್ಥಾನದೊಂದಿಗೆ ಕಂಚಿನ ಪದಕ ಜಯಿಸಿದ್ದಾರೆ. ಹಳಿಯಾಳ ಶಾಸಕ ಆರ್.ವಿ ದೇಶಪಾಂಡೆ, ಪದಕ ಜಯಿಸಿದ ಇಬ್ಬರೂ ಕುಸ್ತಿಪಟುಗಳನ್ನು ಅಭಿನಂದಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭ್ರಷ್ಟಾಚಾರದ ವಿರುದ್ಧ ಜಾಗೃತಿಗೆ, 'ರಾಷ್ಟ್ರದ ಸಮೃದ್ಧಿಗೆ ಸಂಸ್ಕಾರ' ಧ್ಯೇಯದೊಂದಿಗೆ, ಇಂದಿನಿಂದ ನವೆಂಬರ್ 3ರ ವರೆಗೆ, ಜಾಗೃತಿ ಸಪ್ತಾಹ ಆಚರಿಸಲು, ಕೇಂದ್ರ ವಿಚಕ್ಷಣಾ ಆಯೋಗ ಸೂಚಿಸಿದೆ.

<><><>

ಶ್ರೀ ಹಾಸನಾಂಬಾ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿ ಜಾತ್ರಾ ಮಹೋತ್ಸವದ, ನಾಲ್ಕನೇ ದಿನವಾದ, ನಿನ್ನೆ ಭಾನುವಾರ, ಅಸಂಖ್ಯ ಭಕ್ತಾದಿಗಳು, ಬೆಳಗ್ಗೆ ನಾಲ್ಕು ಗಂಟೆಯಿಂದ ಸರತಿಯಲ್ಲಿ ದರ್ಶನ ಪಡೆದರು.

<><><>

ರಾಜ್ಯದ ಸಂಡೂರು, ಶಿಗ್ಗಾಂವಿ ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ಹಿನ್ನೆಲೆ, ವಿವಿಧ ರಾಜಕೀಯ ಪಕ್ಷಗಳಿಂದ ಪ್ರಚಾರ ತೀವ್ರಗೊಂಡಿದೆ.

<><><>

ಬೀದರ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ, ಸಚಿವ ಈಶ್ವರ ಖಂಡ್ರೆ, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ ಅವರೊಂದಿಗೆ ಸಭೆ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ಮನ್ ಕಿ ಬಾತ್’; ‘ಜಾಗತಿಕ ಎನಿಮೇಶನ್ ಪಾವರ್ ಹೌಸ್’ ಆಗಿ ಭಾರತವನ್ನು ರೂಪಿಸೋಣ – ಪ್ರಧಾನಿ ಆಶಯ.
- ‘ಕೂಸಿನ ಮನೆ’; ಮಹಾತ್ಮ ಗಾಂಧಿ ನರೇಗಾ ಯೋಜನೆ, ತಾಯಂದಿರ ತೊಡಗುವಿಕೆ ಪ್ರಮಾಣದಲ್ಲಿ, ಗಣನೀಯ ಏರಿಕೆ – ಪ್ರಿಯಾಂಕ್ ಖರ್ಗೆ.
- ನಾಡಿನ ರೈತರ ಸಮಸ್ಯೆಗಳಿಗೆ, ಸಕಾಲಿಕ ಪರಿಹಾರ ಕಂಡುಕೊಳ್ಳಲು, e-SAP ತಂತ್ರಾಂಶ – ಎನ್.ಚಲುವರಾಯ ಸ್ವಾಮಿ.
- ‘ಅರೆಭಾ ಿ ಗಡಿನಾಡ ಉತ್ಸವ’; ಅರೆಭಾ ಿ, ಸ್ಥಳೀಯ ಭಾ ಿಯಾದರೂ, ವಿಶಾಲವಾಗಿ ಬೆಳೆದಿದೆ – ಸದಾನಂದ ಮಾವಜಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ